**CFC.R.P.67** ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಕೊಪ್ಪಳ

<u>ಎಸ್ .ಸಿ. ನಂ: **71/2021**</u>

Form No.4(Civil)
(R.P.No.57)

ಪಿ.ಡಬ್ಲ್ಯೂ ನಂ: **01**
ಸಿ.ಡಬ್ಲ್ಯೂ ನಂ: **01**
ಸಾಕ್ಷಿಯನ್ನು ದಿನಾಂಕ: **23-12-2025**
ರಂದು ಪ್ರತಿಜ್ಞೆ ಮಾಡಿಸಲಾಯಿತು

| | | |
|---|---|---|
| ಸಾಕ್ಷಿದಾರನ ಹೆಸರು | : | ನಾಗಪ್ಪ |
| ತಂದೆಯ ಹೆಸರು | : | ಗೋವಿಂದಪ್ಪ |
| ವಯಸ್ಸು | : | **53** ವರ್ಷ |
| ಉದ್ಯೋಗ | : | ಒಕ್ಕಲುತನ |
| ವಾಸ ಸ್ಥಳ | : | ಇಂದರಗಿ |

<u>ಸಾಕ್ಷಿಯ ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರವರಿಂದ</u>

ಚಾಸಾ **4** ನನ್ನ ಅಕ್ಕ. ಈ ಪ್ರಕರಣದ ಆರೋಪಿಗಳ ಪರಿಚಯ ಇರುವುದಿಲ್ಲ. ಆರೋಪಿತರು ಗುಂಪುಕಟ್ಟಿಕೊಂಡು ಬಂದು ಚಾಸಾ**4** ರವರನ್ನು ಅಡ್ಡಗಟ್ಟಿ ಕಟ್ಟಿಗೆಗಳಿಂದ ಮತ್ತು ರಾಡಿನಿಂದ ಹೊಡಿ ಬಡಿ ಮಾಡಿಲ್ಲ, ಅವಾಚ್ಯ ಶಬ್ದಗಳಿಂದ ಬೈಯ್ದಿಲ್ಲ, ಜೀವ ಬೆದರಿಕೆ ಹಾಕಿ ಕೊಲೆ ಮಾಡಲು ಪ್ರಯತ್ನ ಮಾಡಿಲ್ಲ ಹಾಗೂ ಜಾತಿ ನಿಂದನೆ ಮಾಡಿಲ್ಲ, ಈಗ ನನಗೆ ತೋರಿಸಿದ ದಾಖಲೆಯಲ್ಲಿ ನನ್ನ ಸಹಿ ಇರುವುದಿಲ್ಲ. ದಾಖಲೆಯನ್ನು <u>ನಿಪಿ **1** ಎಂದು, ವಿವಾದಿತ ಸಹಿಯನ್ನು ನಿಪಿ **1(ಎ)**</u> ಎಂದು ಗುರುತಿಸಲಾಯಿತು.

**2).** ಸ್ವತ್ತು ಪಟ್ಟಿ ನಂಬರ: **118/2021** ರಲ್ಲಿರುವ ಐಟಂ ನಂಬರ **1** ರಿಂದ **4** ಇವುಗಳನ್ನು ಈ ಹಿಂದೆ ನೋಡಿಲ್ಲ. ಸಾಕ್ಷಿದಾರರಿಗೆ ತೋರಿಸಲಾಗಿದೆ ಎಂಬ ಕಾರಣಕ್ಕಾಗಿ ಅವುಗಳನ್ನು ಕ್ರಮವಾಗಿ <u>ಮುದ್ದೆಮಾಲು-**1** ರಿಂದ **4** ಎಂದು</u> ಗುರುತಿಸಲಾಯಿತು. ಅದೇ ರೀತಿ ಸ್ವತ್ತು ಪಟ್ಟಿ ನಂಬರ: **117/2021** ರಲ್ಲಿರುವ ಐಟಂ ನಂಬರ **1** ರಿಂದ **3** ರಕ್ತತಾಗಿದ ಬಟ್ಟೆಗಳು ಯಾರದ್ದು ಎಂದು ಗೊತ್ತಿಲ್ಲ. ಸಾಕ್ಷಿದಾರರಿಗೆ ತೋರಿಸಲಾಗಿದೆ ಎಂಬ ಕಾರಣಕ್ಕಾಗಿ ಅವುಗಳನ್ನು ಕ್ರಮವಾಗಿ <u>ಮುದ್ದೆಮಾಲು-**5** ರಿಂದ **7** ಎಂದು</u> ಗುರುತಿಸಲಾಯಿತು. ಈ ಪ್ರಕರಣಕ್ಕೆ ಸಂಬಂಧಪಟ್ಟ ಹಾಗೇ ಪೊಲೀಸರಿಗೆ ಮರುಹೇಳಿಕೆ ಕೊಟ್ಟಿಲ್ಲ.

(ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರ ಕೋರಿಕೆಯ ಮೇರೆಗೆ ಸದರಿ ಸಾಕ್ಷಿದಾರನನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಿದೆ.)

ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದ

**3).** ಈ ಪ್ರಕರಣದ ಆರೋಪಿಗಳು ಚಾಸಾ **4** ರವರಿಗೆ ಸೇರಿದ ಜಾಗದಲ್ಲಿ ಸೆಗಣಿ ಮತ್ತು ಕುರಿಗಳ ಹಿಕ್ಕಿ ತಂದು ಹಾಕಿ ಗಲೀಜು ಮಾಡುತ್ತಿದ್ದರು ಎಂದರೆ ಗೊತ್ತಿಲ್ಲ. ಅವರ ಕುರಿಗಳನ್ನು ಚಾಸಾ **4** ರವರ ಹೊಲದಲ್ಲಿ ಮೇಯಿಸುತ್ತಿದ್ದರು ಎಂದರೆ ಇಲ್ಲ. ಈ ಕಾರಣಗಳಿಂದ ಆರೋಪಿತರು ಮತ್ತು ಚಾಸಾ **4** ಮಧ್ಯ ಜಗಳ ಆಗುತ್ತಿತ್ತು ಎಂದರೆ ಸರಿಯಲ್ಲ. ಈ ವಿಚಾರವನ್ನು ಚಾಸಾ **4** ನನಗೆ ಹೇಳಿದ್ದು, ನಾನು ಹಿರಿಯರಿಗೆ ವಿಚಾರ ತಿಳಿಸಿ ಆರೋಪಿತರಿಗೆ ಬುದ್ದಿವಾದ ಹೇಳಿದ್ದೆ ಆ ಕಾರಣದಿಂದ ಆರೋಪಿಗಳು ಚಾಸಾ **4** ರವರ ಮೇಲೆ ದ್ವೇಷ ಇಟ್ಟುಕೊಂಡಿದ್ದರು ಎಂದರೆ ಸರಿಯಲ್ಲ.

**4).** ದಿಃ **23-8-2021** ರಂದು ಬೆಳಿಗ್ಗೆ **6** ಗಂಟೆ ಸುಮಾರಿಗೆ ಆರೋಪಿತರೆಲ್ಲರೂ ಮುದ್ದೆಮಾಲು-**1** ರಿಂದ **4** ಇವುಗಳನ್ನು ಹಿಡಿದುಕೊಂಡು ಚಾಸಾ **4** ರವರ ಮನೆ ಬಳಿ ಬಂದು ಅವಮಾನ ಮಾಡಿ ಹಲ್ಲೆ ಮಾಡಿ ಹೊಡೆ ಬಡಿ ಮಾಡಿದ್ದು ನನಗೆ ತಿಳಿದುಬಂತು ಎಂದರೆ ಸರಿಯಲ್ಲ. ನಾನು ಹೋಗಿ ನೋಡಿದಾಗ ಚಾಸಾ **4** ರವರಿಗೆ ರಕ್ತಗಾಯವಾಗಿದ್ದವು ಹಾಗೂ ಆರೋಪಿಗಳು ಆ ಸ್ಥಳದಲ್ಲಿದ್ದರು ಎಂದರೆ ಸರಿಯಲ್ಲ. ಲೇ ಬ್ಯಾಡರ ಸೂಳೇಮಕ್ಕಳೇ ನಿಮ್ಮನ್ನು, ನಿಮ್ಮ ಕುಟುಂಬದವರನ್ನು ಸರ್ವನಾಶ ಮಾಡಿ ಜೀವ ತೆಗೆಯುತ್ತೇವೆ ಎಂದು ಜಾತಿ ನಿಂದನೆ ಮಾಡಿ ಅವಾಚ್ಯ ಶಬ್ದಗಳಿಂದಬೈಯ್ದಿದ್ದರು ಎಂದರೆ ಸರಿಯಲ್ಲ. ನಿಮ್ಮ ಅಕ್ಕನ ಜೀವ ತೆಗೆಯುತ್ತೇವೆ ಲೇ ಬ್ಯಾಡರಸೂಳೇಮಕ್ಕಳೇ ನಿಮ್ಮ ಜೀವ ತೆಗೆಯುತ್ತೇವೆ ಎಂದು ಬೆದರಿಕೆ ಹಾಕಿದರು ಎಂದರೆ ಸರಿಯಲ್ಲ. ಮುದ್ದೆಮಾಲು-**1** ರಿಂದ **4** ಗಳಿಂದ ನನ್ನ ಮೇಲೂ ಸಹಾ ಆರೋಪಿಗಳು ಹಲ್ಲೆ ಮಾಡಲು ಬಂದರು ಎಂದರೆ ಸರಿಯಲ್ಲ. ಕೆಟ್ಟ ಶಬ್ದಗಳಿಂದ ಬೈಯ್ಯುತ್ತಾ ಜೀವ ಬೆದರಿಕೆಯನ್ನು ಸಹಾ ಹಾಕಿದ್ದರು ಎಂದರೆ ಸರಿಯಲ್ಲ.

**5).** ನಂತರ ಚಾಸಾ **4** ರವರನ್ನು ನಾನು ಮುನಿರಾಬಾದ ಸರ್ಕಾರಿ ಆಸ್ಪತ್ರೆಗೆ ಖಾಸಗಿ ವಾಹನದಲ್ಲಿ ಹಾಕಿಕೊಂಡು ಹೋಗಿ ಅಲ್ಲಿಂದ ನಂತರ ಕೊಪ್ಪಳ ಜಿಲ್ಲಾ ಆಸ್ಪತ್ರೆಗೆ ಹೆಚ್ಚಿನ ಚಿಕಿತ್ಸೆಗಾಗಿ ಕರೆದುಕೊಂಡು ಹೋದೆ ಎಂದರೆ ಸರಿಯಲ್ಲ. ಘಟನೆಗೆ ಸಂಬಂಧಪಟ್ಟಂತೆ ನಾನು ನಿಪಿ **1** ದೂರು ಅಲ್ಲದೇ "ನಾನು ಮೇಲ್ಕಂಡ . . . . ದಾಖಲಾಗಿದ್ದು ಇರುತ್ತದೆ" ಎಂದು ನಿಪಿ **2** ರೀತ್ಯ ಮರು ಹೇಳಿಕೆ

ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಗಳು ನನಗೆ ಪರಿಚಯ ಇದ್ದು ಅವರೊಂದಿಗೆ ಪ್ರಕರಣವನ್ನು ರಾಜೀ ಮಾಡಿಕೊಂಡಿರುವ ಕಾರಣ ನಿಜವಿಚಾರ ಮುಚ್ಚಿಟ್ಟು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲು ಃ ಆರೋಪಿತರ ಪರ ವಕೀಲರಿಂದ</u>

ಆರೋಪಿ ಪರ ವಕೀಲರು ಹಾಜರಿದ್ದು, ಪಾಟೀ ಸವಾಲು ಏನೂ ಇರುವುದಿಲ್ಲಾ ಅಂತಾ ತಿಳಿಸಿದ್ದಾರೆ.

ಮರು ವಿಚಾರಣೆ ಇಲ್ಲ.

(ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತ ಉಲ್ಲೇಖನದ ಮೇರೆಗೆ ಸಾಕ್ಷ್ಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

(ಚಂದ್ರಶೇಖರ ಸಿ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಕೊಪ್ಪಳ